2021-22

**B.Aadhar'** Peer-Reviewed & Refereed Indexed Multidisciplinary International Research Journal
Impact Factor -(SJIF) -8.575, Issue NO, 371 CCCLXXI
ISSN : 2278-9308
September 2022

Vachan Sahityakke Dalit Vachanakarar Sanskutiya chintane

# ವಚನ ಸಾಹಿತ್ಯಕ್ಕೆ ದಲಿತ ವಚನಕಾರರ ಸಂಸ್ಕೃತಿಯ ಚಿಂತನೆ

**ಶ್ರೀ ಪುಂಡಲೀಕ ಎಚ್ ಮಾದರ**
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ
ಶ್ರೀ ಅನ್ನದಾನೇಶ್ವರ ಕಲಾ ವಿಜ್ಞಾನ ವಾಣಿಜ್ಯ ಪದವಿ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ನರೇಗಲ್ಲ - 582119
ತಾಲ್ಲೂಕು: ಗಜೇಂದ್ರಗಡ ಜಿಲ್ಲೆ: ಗದಗ ಕರ್ನಾಟಕ ರಾಜ್ಯ

ಜಾತೀಯತೆ ತಾಂಡವವಾಡುತ್ತಿದ್ದ ಕಾಲದಲ್ಲಿ ಬಸವಣ್ಣ 'ದಯವೇ ಧರ್ಮದ ಮೂಲವಯ್ಯ' ಎಂದು ಪ್ರತಿಪಾದಿಸಿದ. ದಯವಿರದ ಧರ್ಮವು ಧರ್ಮವೇ ಅಲ್ಲವೆಂದು ಹೇಳಿದ. ಆ ಮೂಲಕ ಭೇದ ಭಾವವನ್ನು ಅಳಿಸಿ ಹಾಕುವಲ್ಲಿ ಶ್ರಮಿಸಿದ. ಜಾತಿನಿಂದನೆಗಳನ್ನು ಮಾಡುತ್ತಿದ್ದ ಕಾಲದಲ್ಲಿ ಅವರಾಡಿದ ಮಾತುಗಳು ನೊಂದವರ, ಅಸ್ಪೃಶ್ಯರ, ಧೃತಿಗೆಟ್ಟವರಲ್ಲಿ ಆತ್ಮವಿಶ್ವಾಸ ತುಂಬುವಂತಿದ್ದವು.

ನಡೆ ನುಡಿ ಸಿದ್ಧಾಂತವಾದಲ್ಲಿ
ಕುಲ ಹೊಲೆ ಸೂತಕವಿಲ್ಲ
ನುಡಿಲೇಸು ನಡೆಯಧಮವಾದಲ್ಲಿ
ಅದೇ ಬಿಡುಗಡೆ ಇಲ್ಲದ ಹೊಲೆ
ಕಳವು ಪಾರದ್ವಾರಂಗಳಲ್ಲಿ ಹೊಲಬನರಿಯದೆ
ಕೆಟ್ಟು ನಡೆವುತ್ತ ಮತ್ತೆ ಕುಲಜರೆಂಬ ಒಡಲುಂಟೆ?
ಆಚಾರವೇ ಕುಲ, ಅನಾಚರವೇ ಹೊಲೆ
ಇಂತೀ ಉಭಯವ ತಿಳಿದರಿಯಬೇಕು
ಕೈಯುಳಿಕತ್ತ ಅಡಿಗೊಂಟಕ್ಕಡಿಯಾಗಬೇಡ
ಅರಿ ನಿಜಾತ್ಮ ರಾಮ ರಾಮನಾ

ನೇರ ನಡೆ-ನುಡಿಗೆ ಒಂದಾಗಿರುವ ವ್ಯಕ್ತಿಯಲ್ಲಿ ಕುಲ ಎಂಬುದು ಇರುವುದಿಲ್ಲ. ಯಾವ ವ್ಯಕ್ತಿಯು ಕೊಟ್ಟ ವಚನವನ್ನು ತಪ್ಪುತ್ತಾನೋ ಅವನೇ ಹೊಲೆಯ ಎನ್ನುವ ಮಾದರ ಚನ್ನಯ್ಯ ಸ್ಪಷ್ಟ ನಿಲುವಿನ ವಚನಕಾರನಾಗಿದ್ದ. ಬಸವಣ್ಣನಂತಹ ಮೇಲ್ವರ್ಗದ ವಚನಕಾರರಿಗೆ ಈ ವ್ಯಕ್ತಿಯ ವ್ಯಕ್ತಿತ್ವ ಆಕರ್ಷಕವಾಗಿತ್ತು. ಮಾದರ ಚನ್ನಯ್ಯನ ವ್ಯಕ್ತಿತ್ವಕ್ಕೆ ಮಾರು ಹೋಗಿಯೋ ಏನೋ ಒಂದು ಕಡೆ ಬಸವಣ್ಣನವರೆ "ಅಪ್ಪನು ನಮ್ಮ ಮಾದರ ಚನ್ನಯ್ಯ...ಮಾದರ ಚೆನ್ನಯ್ಯನ ಮನೆಯ ಮಗ ನಾನು..." ಎಂದು ಹೃದಯ ತುಂಬಿ ಹೇಳಿದ್ದಾರೆ.

ಭಾರತೀಯ ಸಾಮಾಜಿಕ, ಸಾಹಿತ್ಯಿಕ ಇತಿಹಾಸದಲ್ಲಿ ದಲಿತರು ಅಂದಂದಿನ ದಿನಮಾನಗಳಲ್ಲಿ ಅಂದಂದಿನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಲ್ಲಿ ಒಂದೊಂದು ರೀತಿಯ ಹೆಸರು ಮಾಡುತ್ತ ಬಂದಿದ್ದಾರೆ. ವೈದಿಕ ವ್ಯವಸ್ಥೆಯಲ್ಲಿ ಶೋಷಣೆಗೊಳಗಾಗಿ ತಮ್ಮ ಬದುಕನ್ನೆ ಇನ್ನೊಬ್ಬರ ಸುಖಕ್ಕಾಗಿ ಸವೆಸಿದ ಇವರು. ಅವಮಾನ ದುಃಖ-ದುಮ್ಮಾನಗಳನ್ನು ಹೊತ್ತವರು. ವ್ಯವಸ್ಥೆಯನ್ನು ವಿರೋಧಿಸಿ ಹೊಸ ಧರ್ಮದ ಹುಟ್ಟಿನಲ್ಲಿ ಬುದ್ಧನಿಗೆ, ಮಹಾವೀರನಿಗೆ ಅಲ್ಲದೆ 12ನೆಯ ಶತಮಾನದ ಕ್ರಾಂತಿ ಪುರುಷ ಬಸವಣ್ಣನವರ ಜೊತೆಗೂಡಿ ಸಾಮಾಜಿಕ ಸೇವೆ ಮಾಡುವುದರ ಜೊತೆಗೆ ಆ ಮಹಾಪುರುಷರನ ಸಹಕಾರದಿಂದ ನಾವೂ ಮನುಷ್ಯರು, ನಮಗೂ ಒಂದು ಅಸ್ತಿತ್ವವಿದೆ ಎಂದು ಸಾಧೀತು ಪಡಿಸಿದವರು ದಲಿತರು

ವಚನ ಚಳವಳಿಯ ವಿಷಯಕ್ಕೆ ಬಂದಾಗ ಅನೇಕ ವಚನಕಾರರು ಕೆಳ ವರ್ಗದವರ ಹಾಗೂ ನೋವುಂಡವರ ಬಗೆಗೆ ಮಾತನಾಡುತ್ತಾ, ಸಮಾಜದಲ್ಲಿ ಪರಿವರ್ತನೆಯನ್ನು ತರಲು ಹೊಸ ಹೆಜ್ಜೆಗಳನ್ನು ಇಡಲು ಪ್ರಯತ್ನಿಸಿ ಸಫಲರಾದರು. ಬಸವಣ್ಣನಂತಹ ಒಬ್ಬ ಮಹತ್ವದ ವಚನಕಾರ ಇಡೀ ವಚನ ಚಳವಳಿಯನ್ನು ಚನ್ನಬಸವಣ್ಣ, ಅಲ್ಲಮಪ್ರಭು, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ ಮುಂತಾದ ವಚನಕಾರರೊಂದಿಗೆ ಕೂಡಿಕೊಂಡು ಮೂಢನಂಬಿಕೆಗಳನ್ನು ಕಿತ್ತೊಗೆದು, ಸಮಾಜದಲ್ಲಿ ಮೇಲು-ಕೀಳು ಭಾವನೆಗಳನ್ನು ಅಳಿಸಿಹಾಕಲು, ಸಮಾನತೆಯನ್ನು ತರಲು ಸಮರ್ಥವಾಗಿ ಪ್ರಯತ್ನಿಸಿದುದು ವಚನ ಚಳವಳಿಯ ಒಂದು ದೊಡ್ಡ ವೈಶಿಷ್ಟ್ಯ.

ಅನುಭವ ಮಂಟಪದ ಮೂಲಕ ಅನೇಕ ವಚನಕಾರರು ತಾವು ಬರೆದ ವಚನಗಳನ್ನು ಮುಕ್ತವಾಗಿ ಚರ್ಚಿಸಿದರು. ತಮ್ಮನ್ನು ತಾವೇ ವಿಮರ್ಶೆಗೊಳಪಡಿಸಿಕೊಂಡರು. 'ಅನುಭವ ಮಂಟಪ'ದಿಂದ ಗುರುತಿಸಿಕೊಂಡು ಎತ್ತರೆತ್ತರಕ್ಕೆ ಬೆಳೆದರು. ಯಾವುದೇ ವಚನಕಾರರನ್ನು ತೆಗೆದುಕೊಂಡರೂ ಅವರು ಕಾಯಕಕ್ಕೆ ನೀಡಿದ ಮಹತ್ವದ ಸ್ಥಾನವನ್ನು ಯಾರೂ ಅಲ್ಲಗಳೆಯುವಂತಿಲ್ಲ. ವಚನಕಾರರು ಕಾಯಕದಲ್ಲೇ ದೇವರನ್ನು ಕೈಲಾಸವನ್ನು ಕಾಣುತ್ತಿದ್ದರು. "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎನ್ನುವ ನುಡಿಗಡಣಗಳನ್ನು ಉಸುರುತ್ತ ತಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಂಡರು, ಬಸವಣ್ಣನವರಂತೂ ಮಾನವ್ಯದ ಮಂದಾರವನ್ನರಳಿಸುವ ಮಹಾಪುರುಷರೆನಿಸಿದರು. ಅವರ ವ್ಯಕ್ತಿತ್ವ ಎಲ್ಲರನ್ನೂ ಆಕರ್ಷಿಸುವ ಲೋಹಚುಂಬಕದಂಥದು.

ವಚನ ಚಳವಳಿಯಲ್ಲಿ ಬರುವ ಅನೇಕ ವಚನಕಾರರು ದಲಿತರ ಹಾಗೂ ನೋವುಂಡವರ ಬಗೆಗೆ, ಕ್ರೂರ ವ್ಯವಸ್ಥೆಗೆ ಬಲಿಯಾಗಿ ನರಳುವವರ ಬಗೆಗೆ ಸಮರ್ಥವಾಗಿ ಬರೆಯುತ್ತಾರೆ, ಅಸಮಾನತೆಯಿಂದ ಕೂಡಿದ ವ್ಯವಸ್ಥೆಯ ವಿರುದ್ಧ ನಿರ್ಭಿಡೆಯಿಂದ ಮಾತನಾಡಿದ್ದಾರೆ ಮತ್ತು ಅನೇಕರಿಗೆ ಮಾತನಾಡುವುದನ್ನು ಕಲಿಸಿದ್ದಾರೆ. ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣನಂತಹ ವಚನಕಾರರು ಬಡವರ ಬಗೆಗೆ, ದಲಿತರ ಬಗೆಗೆ ಬರೆಯುತ್ತಲೇ ಅನೇಕ ದಲಿತರ ವಚನಕಾರರಿಗೆ ಮಾರ್ಗದರ್ಶನ ನೀಡುವುದರ ಮೂಲಕ; ಅವರಿಗೆ ಅನುಭವಮಂಟಪದಂತಹ ಸಾಂಸ್ಕೃತಿಕ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟರು. ವರ್ಣವ್ಯವಸ್ಥೆಯ ಜಂತಿ ಗೋಡೆಗಳನ್ನು ಕೆಡವಿ

**B.Aadhar'** Peer-Reviewed & Refereed Indexed Multidisciplinary International Research Journal
Impact Factor -(SJIF) -8.575, Issue NO, 371 CCCLXXI
ISSN : 2278-9308
September 2022

ವ್ಯವಸ್ಥೆಯ ವಿರುದ್ಧ ಮೊಟ್ಟಮೊದಲು ಮಾತನಾಡಿದ್ದು ಇದೇ ಸಂದರ್ಭದಲ್ಲಿ ಇದು ಇವತ್ತಿನ ಲೇಖಕಿಯರಿಗೂ ಪ್ರೇರಣೆಯನ್ನು ನೀಡಿದ್ದು. ಅನೇಕ ಲೇಖಕಿಯರು ತಮ್ಮ ನೋವುಗಳಿಗೆ, ನಿಟ್ಟುಸಿರುಗಳಿಗೆ ಅಭಿವ್ಯಕ್ತಿ ನೀಡಿದ್ದಾರೆ.

ಪೂರ್ವಾಶ್ರಮದಲ್ಲಿ ಸೂಳೆಯಾಗಿದ್ದ ಸಂಕವ್ವೆ ಎನ್ನುವ ವಚನಕಾರ್ತಿ ಕೆಲಸದಲ್ಲಿ ಪ್ರಾಮಾಣಿಕತೆಯನ್ನು ಹೊಂದಿದವಳು. ತಾನು ನಂಬಿಕೊಂಡು ಬಂದ ನಿಲುವನ್ನು ವಚನದ ಮೂಲಕ ಹೇಳುವ ರೀತಿ ಹೀಗಿದೆ.

**ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ**
**ಹಿಡಿದರೆ ಬತ್ತಲೆ ನಿಲ್ಲಿಸಿ ಕೊಲುವರಯ್ಯಾ**
**ವ್ರತಹೀನನರಿದು ಬೆರೆದರೆ**
**ಕಾದ ಕತ್ತಿಯಲ್ಲಿ ಕಿವಿ ಮೂಗ ಕೊಯ್ವರಯ್ಯಾ**

ಉರಿಲಿಂಗಪೆದ್ದಿಯ ಹೆಂಡತಿ ಕಾಳವ್ವೆ ಕೂಡ ವಚನ ಚಳವಳಿಯ ಪ್ರಮುಖ ವಚನಕಾರ್ತಿಯಾಗಿದ್ದಾಳೆ.

**ಒಡೆಯರೆಂಬ ತುಡುಗುಣಿಗಳು ತಾವು ಹೊಡೆಗೊಂಬಲ್ಲಿ**
**ಅವರ ಮನೆಗೆ ಹೂ ಹಣ್ಣು ಕಾಯಿ ಪತ್ರೆಗಳ ತಾಹ**
**ಹೋಗುವ ಬರುವ ಊಳಿಗದ ಕೊಂಬಾತ ಭಕ್ತನಲ್ಲ**
**ಅಲ್ಲಿ ಹೊಡೆಗೊಂಬಾತ ಜಂಗಮನಲ್ಲ**

ಎನ್ನುವ ತನ್ನ ಈ ವಚನದಲ್ಲಿ ಆಳುವ ಒಡೆಯರನ್ನೂ ತುಡುಗುಣಿಗಳಿಗೆ ಹೋಲಿಸುವ ಉಪಮೆಯಲ್ಲಿ ತೀವ್ರತರವಾದ ಪ್ರತಿಭಟನೆಯಿದೆ. ನೂರಾರು ಮಹಿಳೆಯರ ಆಕ್ರಂದನ ಸಿಟ್ಟು ಅಲ್ಲಿ ಮಡುಗಟ್ಟಿ ನಿಂತುದಲ್ಲದೆ ಸಿಡಿಲಾಗಿ ಸಿಡಿದಿದೆ. ತುಡುಗುಣಿಯಂತಹ ಜನರ ಮನೆಗೆ ಹೋಗುವವರನ್ನೇ ಕಾಳವ್ವೆ ವಿರೋಧಿಸುತ್ತಾಳೆ.ಅವಳ ಈ ಮಾತಿನ ಹಿಂದೆ ಕೊಳಕು ವ್ಯವಸ್ಥೆಯನ್ನೇ ವಿರೋಧಿಸಿದ ಗುಣವನ್ನು ಗಮನಿಸಬಹುದು. ಇದೇ ವಚನಕಾರ್ತಿ ಇನ್ನೊಂದೆಡೆ "ಭಕ್ತರ ಕುಲವನೆತ್ತಿ ನಿಂದಿಸುವಾತ... ಭಕ್ತನೇ?" ಎಂದು ಪ್ರಶ್ನಿಸಿದ್ದಾಳೆ.

ಉರಿಲಿಂಗದೇವನ ಶಿಷ್ಯ ಉರಿಲಿಂಗಪೆದ್ದಿ ಸಂಸ್ಕೃತ ಉಕ್ತಿಗಳನ್ನು ಬಳಸಿಕೊಂಡು ವಚನಗಳನ್ನು ಬರೆದ ವಚನಕಾರ. ದಲಿತ ವಚನಕಾರನಾಗಿದ್ದರೂ ಕೂಡ ಸಾಮಾಜಿಕ ವಿಡಂಬನೆ ಬಗೆಗೆ, ಅಸಮಾನತೆಯ ಬಗೆಗೆ ಅಷ್ಟಾಗಿ ಮಾತನಾಡಿಲ್ಲ, ಭಕ್ತಿಯ ಬಗೆಗೆ ಶಿವನ ಬಗೆಗೆ ಬರೆದುದೇ ಹೆಚ್ಚು. ಇದರೊಂದಿಗೆ ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯವರೂ ದಲಿತ ವಚನಕಾರರಾಗಿದ್ದು ವಚನ ರಚನೆ ಹಾಗೂ ಸಂಘಟನೆಯಲ್ಲಿ ಪಾಲ್ಗೊಳ್ಳುವುದರ ಮೂಲಕ ಜನಪರ ಚಿಂತೆಯನ್ನು ಮೂಡಿಸಲು ಪ್ರಯತ್ನಿಸಿದವರಾಗಿದ್ದಾರೆ.

ವಚನಕಾರರಲ್ಲಿ ಕೆಲವರು ಮಾತ್ರ ವಚನ ರಚನೆ ಮಾಡುವುದರ ಮೂಲಕ ಬೆಳಕಿಗೆ ಬಂದಿದ್ದಾರೆ. ಇನ್ನೂ ಅದೆಷ್ಟೋ ಅಜ್ಞಾತ ವಚನಕಾರರು ನಮ್ಮ ಗಮನಕ್ಕೆ ಬಾರದೆ ಬರೀ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕಾಯಕಕ್ಕೆ ಮಹತ್ವವನ್ನು ಕೊಟ್ಟು ಮರೆಯಾಗಿ ಹೋಗಿದ್ದಾರೆ. ಒಂದು ಚಳವಳಿ ತೀವ್ರವಾಗಿ ಬೆಳೆದು ಹೆಸರು ವಾಸಿಯಾಗಿ ಬೆಳೆಯುವಲ್ಲಿ ಆ ಚಳವಳಿಯ ಹಿಂದೆ ಮರೆಯಾಗಿರುವ ವ್ಯಕ್ತಿಗಳು ಕೂಡ ಕಾರಣರಾಗುತ್ತಾರೆ. ವೀರಶೈವ ಧರ್ಮದ ಬೆಳವಣಿಗೆಯಲ್ಲಿ ಬಸವಣ್ಣನವರ ಪ್ರಯತ್ನ ಎಷ್ಟು ಮುಖ್ಯವೋ ಅಷ್ಟೇ ದಲಿತ ಶೋಷಿತ ವರ್ಗದಿಂದ ಬಂದ ಶರಣರೂ ಕೂಡ ವೀರಶೈವ ಧರ್ಮದ ಬೆಳವಣಿಗೆಗೆ ಶ್ರಮಿಸಿದ್ದಾರೆಂಬ ಮಾತಿನಲ್ಲಿ ಅತಿಶಯೋಕ್ತಿಯೇನಿಲ್ಲ.

ಅಂದಿನ ಸಮಾಜದಲ್ಲಿ ಕಂಡುಬರುವ ವೈದಿಕ ಪದ್ಧತಿ, ಅಸಮಾನತೆ, ಅನ್ಯಾಯಗಳ ವಿರುದ್ಧ ಪ್ರತಿಭಟನೆ ಮಾಡಿದ ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣನಂತಹ ವಚನಕಾರರು ದಲಿತ ವಚನಕಾರರನ್ನು ಅಪ್ಪಿಕೊಂಡು ಅವರೊಂದಿಗೆ ಒಂದಾಗಿ ಪ್ರಸಾದ ಸ್ವೀಕರಿಸಿದರು. ವಚನ ರಚನೆಯ ಮೂಲಕ ಎತ್ತರೆತ್ತರಕ್ಕೆ ಬೆಳೆಯುವಲ್ಲಿ ಸಹಕರಿಸಿದರು. ದಲಿತ ವಚನಕಾರರು ಅನೇಕ ಮಹತ್ವದ ಸಂಗತಿಗಳನ್ನು, ಜನಪರ ಚಿಂತನೆಗಳನ್ನು ತಮ್ಮ ವಚನಗಳ ಮೂಲಕ ಬಿಚ್ಚಿಟ್ಟಿದ್ದಾರೆ.ಅವರ ಚಿಂತನೆಗಳು ಇಂದಿನ ಜನತೆಯ ಬದುಕಿಗೆ ಪ್ರೇರಣೆಯನ್ನು ಒದಗಿಸುವ ದಾರಿ ದೀಪದಂತಿದೆ. ಆ ದೀಪದ ಬೆಳಕಿನಲ್ಲಿ ನಾವೆಲ್ಲರೂ ನಡೆಯಬೇಕಾಗಿದೆ.

ಕರ್ನಾಟಕದಲ್ಲಿ ನಡೆದ ಶರಣರ ಚಳವಳಿ ಧಾರ್ಮಿಕ ಮತ್ತು ವೈಚಾರಿಕತೆಯ ಸಮನ್ವಯವನ್ನು ಸಾಧಿಸಿದ ಒಂದು ಅಪೂರ್ವ ಆಂದೋಲನ. ಯಜ್ಞ-ಯಾಗಾದಿಗಳ ಹಾಗೂ ದೇವಾಲಯಗಳ ಮೂಲಕ ಮೇಲು ಜಾತಿಯವರು ಕೆಳ ಜಾತಿಯವರನ್ನು ವ್ಯವಸ್ಥಿತ ಶೋಷಣೆಗೆ ಗುರುಪಡಿಸಿದ್ದ ಕಾಲದಲ್ಲಿ, ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಬಸವಣ್ಣ ಜಾತಿ ವ್ಯವಸ್ಥೆಯ ವಿರುದ್ಧ ಬಂಡೆದ್ದು ಎಲ್ಲರೂ ಸಮಾನರೆಂದು ಸಾರಿದ. ಅಲ್ಲಿಯ ತನಕ ಪ್ರಾಣಿಗಳಂತೆ ಕೀಳಾಗಿ ಬದುಕಿದ್ದ, ಬಹುದೊಡ್ಡ ಸಂಖ್ಯೆಯಿಂದ ಕೂಡಿದ ತಳಸಮುದಾಯದ ಬಸವ ಚಿಂತನೆಗೆ ಬೆಂಬಲವಾಗಿ ನಿಂತಿತು.

**ಪರಾಮರ್ಶನ ಕೃತಿಗಳು:**

1. ಕನ್ನಡ ಕಾವ್ಯದಲ್ಲಿ ದಲಿತ ಧ್ವನಿಗಳು: ಸಂ. ಅರವಿಂದ ಮಾಗತ್ತಿ.
2. ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ ಮತ್ತು ಅಭಿವ್ಯಕ್ತಿ: ಸಂ. ಬರಗೂರ ರಾಮಚಂದ್ರಪ್ಪ.
3. ವಚನ ಧರ್ಮಸಾರ: ಎಂ. ಆರ್. ಶ್ರೀನಿವಾಸಮೂರ್ತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
4. ಬಸವರಾಜ ಸಬರದ, ವಚನ ಸಂಸ್ಕೃತಿ, ಪಲ್ಲವಿ ಪ್ರಕಾಶನ, ಪುಟ 4-2007.
5. ಮ.ನ.ಜವರಯ್ಯ: ದಲಿತ ವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ ಪುಟ 65, 1997.
6. ಶರಣ ಸಂಸ್ಕೃತಿ ಮತ್ತು... ಡಾ. ಎಚ್. ಟಿ. ಪೋತೆ

Impact Factor-8.575 (SJIF)

ISSN-2278-9308

# B.Aadhar

Peer-Reviewed & Refreed Indexed

**Multidisciplinary International Research Journal**

**September-2022**

**ISSUE No - 371 (CCCLXXI)**

REVIEW OF LANGUAGE, LITERATURE, SCIENCE, COMMERCE AND HUMANITIES




**Chief Editor**
Prof. Virag S. Gawande
Director
Aadhar Social
Research & Development
Training Institute Amravati

**Editor**
Dr. D. L. PAWAR
Assistant Professor and Head
Department of Political Science

**Editor**
Dr. RAVI C. S.
Assistant Professor and Head
Department of Commerce

**Executive Editor**
Dr. SANDEEPKUMAR K
Assistant Professor and Head
Department of Botany

**Executive Editor**
Dr. KALLAYYA S. HIREMATH
Assistant Professor
Department of Kannada

Sri Annadaneshwar Arts Science Commerce College & P.G. Centre, Naregal-582119 Tq: Gajendragad Dist: Gadag

**This Journal is indexed in :**
- Scientific Journal Impact Factor (SJIF)
- Cosmos Impact Factor (CIF)
- International Impact Factor Services (IIFS)

For Details Visit To : www.aadharsocial.com

Aadhar Publications

**B.Aadhar'** Peer-Reviewed & Refereed Indexed Multidisciplinary International Research Journal

Impact Factor -(SJIF) -8.575, Issue NO, 371 CCCLXXI

ISSN : 2278-9308 September, 2022

# Editorial Board

**Chief Editor -**
**Prof.Virag S.Gawande,**
**Director,**
Aadhar Social Research &,
Development Training Institute, Amravati. **[M.S.] INDIA**

**Executive-Editors -**

- **Dr.Dinesh W.Nichit** - Principal, Sant Gadge Maharaj Art's Comm,Sci Collage, **Walgaon.Dist. Amravati.**
- **Dr.Sanjay J. Kothari** - Head, Deptt. of Economics, G.S.Tompe Arts Comm,Sci Collage Chandur Bazar Dist. Amravati

**Advisory Board -**

- **Dr. Dhnyaneshwar Yawale** - Principal, Sarswati Kala Mahavidyalaya , Dahihanda, Tq-Akola.
- **Prof.Dr. Shabab Rizvi** ,Pillai's College of Arts, Comm. & Sci., New Panvel, Navi Mumbai
- **Dr. Udaysinh R. Manepatil** ,Smt. A. R. Patil Kanya Mahavidyalaya, Ichalkaranji,
- **Dr. Sou. Parvati Bhagwan Patil** , Principal, C.S. Shindure College Hupri, Dist Kolhapur
- **Dr. Parikshit Layek,** Vice-Principal, Sri Ramakrishna Sarada Ashrama Teacher's Training College
- **Review Committee -**
- **Dr. D. R. Panzade,** Assistant Pro. Yeshwantrao Chavan College, Sillod. Dist. Aurangabad (MS)
- **Dr.Suhas R.Patil** ,Principal ,Government College Of Education, Bhandara, Maharashtra
- Dr. **Kundan Ajabrao Alone** ,Ramkrushna Mahavidyalaya, Darapur Tal-Daryapur, Dist-Amravati.
- **DR. Gajanan P. Wader** Principal , Pillai College of Arts, Commerce & Science, Panvel
- **Dr. Bhagyashree A. Deshpande,** Professor Dr. P. D. College of Law, Amravati]
- **Dr. Sandip B. Kale,** Head, Dept. of Pol. Sci., Yeshwant Mahavidyalaya, Seloo, Dist. Wardha.
- **Dr. Hrushikesh Dalai** , Asstt. Professor K.K. Sanskrit University, Ramtek
- **Dr.Swapnil Arsad** , Asst. Prof. Dept. of Physics Shri Shivaji Science College, Amravati

*Our Editors have reviewed paper with experts' committee, and they have checked the papers on their level best to stop furtive literature. Except it, the respective authors of the papers are responicible for originality of the papers and intensive thoughts in the papers.*

**- Executive Editor**

**Published by -**
**Prof.Virag Gawande**
**Aadhar Publication** ,Aadhar Social Research & Development Training Institute, New Hanuman Nagar, In Front Of Pathyapustak Mandal, Behind V.M.V. College,Amravati
( M.S ) India Pin- 444604 **Email : 1**
**Website :** www.aadharsocial.com **Mobile : 9595560278 /**

**B.Aadhar'** Peer-Reviewed & Refereed Indexed Multidisciplinary International Research Journal

Impact Factor -(SJIF) -8.575, Issue NO, 371 CCCLXXI

ISSN : 2278-9308
September, 2022


| | | |
|---|---|---|
| 24 | Coalition Experiment At The Centre And State **Dr. Nasirahmed M Jangubhai** | 135 |
| 25 | Women Empowerment In India **Prof. Paravin M Shaikh** | 140 |
| 26 | Problems and Prospects of Indian Democracy: An Overview **Dr. Shobhadevi Rathod** | 144 |
| 27 | Dr. Bhimrao Ambedkar's *Annihilation Of Caste:* An Overview **Dr. Arunkumar Nooli** | 151 |
| 28 | Role Of Infrastructure Facilities In Rural Development **Paravin M Shaikh** | 155 |
| 29 | Women Empowerment; Constitutional and Legislative Provisions: An Overview **Dr. Tarannum Jabeen** | 158 |
| 30 | Current Practices of Human Resource Value Reporting **Pradeep R Bhandary** | 165 |
| 31 | Gandhian Ideals and Directive Principles: Issues and Challenges **Prof. S.S. Hiremath** | 172 |
| 32 | Effect of medicinal plants for the asthma treatment **Dr.Sandeepkumar.K , Rushikesh Pawar , Bharataraj, N Ballari** | 176 |
| 33 | Caste Based Occupation Problems and Prospectus **Guruswamy A** | 180 |
| 34 | Development of Irrigation in Hassan District: A Geographical Study **Dr. M R Shivaram** | 184 |
| 35 | An Overview Of The Nationalism **Jagannath S. Malgond** | 188 |
| 36 | ಕನ್ನಡ ನಾಟಕ – ರಂಗಭೂಮಿ ಪರಂಪರೆ ಮತ್ತು ಇತಿಹಾಸ **ಡಾ. ಕಲ್ಲಯ್ಯ ಎಸ್. ಹಿರೇಮಠ** | 194 |
| 37 | ವಚನ ಸಾಹಿತ್ಯಕ್ಕೆ ದಲಿತ ವಚನಕಾರರ ಸಂಸ್ಕೃತಿಯ ಚಿಂತನೆ **ಶ್ರೀ ಪುಂಡಲೀಕ ಎಚ್ ಮಾದರ** | 199 |
| 38 | ಕುವೆಂಪು ಅವರ ನಾಟಕಗಳು **ಡಾ. ಜೆ. ಕುಮಾರ್** | 202 |
| 39 | ಸಂತ ಶಿಶುವಿನಹಾಳ ಶರೀಫ್‌ರ ತತ್ವಪದಗಳಲ್ಲಿ: ಗುರು–ಶಿಷ್ಯ ಸಂಬಂಧ (೧೮೮೯–೧೮೯೧) **ಡಾ.ಸಂತೋಷ ಹಿರೇಮಠ** | 206 |
| 40 | ಮುಂಡರಗಿ ತಾಲೂಕಿನ ಶಾಸನಗಳಲ್ಲಿ ಸ್ತ್ರೀಯರ ಸ್ಥಾನಮಾನ **ಡಾ. ವನಜಾಕ್ಷಿ ಎನ್ ಭರಮಗೌಡರ** | 210 |
| 41 | ಮುದ್ದಣನ ಮನೋರಮೆ: ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಹೃದಯಲೋಕದ ಪ್ರತಿನಿಧಿಯಾಗಿ **ಮಮತ ಎಂ.** | 215 |
| 42 | ಕನ್ನಡ ಕೃತಿಗಳಲ್ಲಿ ಪೂನಾ ಒಪ್ಪಂದದ ಉಲ್ಲೇಖಗಳು **ಶ್ರೀಮತಿ ಲತಾ ಎನ್. ಕಿಲ್ಲೇದಾರ** | 218 |
| 43 | ಡಾ. ಆರ್. ಸಿ. ಹಿರೇಮಠ ಅವರು ಸಂಪಾದಿಸಿದ ಷಟ್ಪದಿ ಕಾವ್ಯಗಳು **ಡಾ. ನಾಗರಾಜ ಬಳಿಗೇರ** | 220 |

We the Research Organization will do provide help for the following works listed below.

*Support for Arts, Commerce & Science all Disciplines*

- Research Paper Publication
- Book Chapters for Publications
- ISBN Publications Supports
- M.Phil Dissertations Publish
- Ph.D. Thesis in Book Format
- ISSN Journals with Impact Factor
- Online Book Publication
- Seminar Special Issues
- Conference Proceedings

**Aadhar International Publication**

For Details Visit To : www.aadharsocial.com

**Mobile : 9595560278 /**

Aadhar PUBLICATIONS

For Details www.aadharsocial.com

New Hanuman Nagar, In Front Of
Pathyapustak Mandal, Behind V.M.V. College, Amravati ( M.S ) India Pin- 444604
, Mob-- 9595560278, Emial: aadharpublication@gmail.com

Price:Rs.500/

issn 2278-9308